# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 1129 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 25.07.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಈ ಹಿಂದೆ ನೀಡಲಾಗಿದ್ದ ಸಿಎಲ್–2 ಮತ್ತು ಸಿಎಲ್–9 ಸನ್ನದುಗಳು ನವೀಕರಣವಾಗದೆ ಸ್ಥಗಿತಗೊಂಡಿದ್ದರೆ ವಿವರ ನೀಡುವುದು: ಮತ್ತು ಈ ಸ್ಥಗಿತಗೊಂಡ ಸನ್ನದುಗಳನ್ನು ನವೀಕರಣ ಮಾಡಿಕೊಳ್ಳಲು ಸನ್ನದುದಾರರಿಗೆ ಸೂಚಿಸಲಾಗಿದೆಯೇ; ಈ ರೀತಿ ಸ್ಥಗಿತಗೊಂಡ ಸನ್ನದುಗಳನ್ನು ನವೀಕರಣ ಮಾಡದೇ ಇದ್ದುದರಿಂದ ಸರ್ಕಾರಕ್ಕೆ ಆಗುತ್ತಿರುವ ಆದಾಯ ಹಾನಿ ಎಷ್ಟು; (ಮಾಹಿತಿ ನೀಡುವುದು) | ದಿನಾಂಕ:30.06.2024ರ ಅಂತ್ಯಕ್ಕೆ ರಾಜ್ಯದಲ್ಲಿ 133 ಸಿಎಲ್–2 ಮತ್ತು 93 ಸಿಎಲ್–9 ಸನ್ನದುಗಳು ಸ್ಥಗಿತಗೊಂಡಿರುತ್ತದೆ. ಜಿಲ್ಲಾವಾರು ಅಂಕಿ–ಅಂಶಗಳನ್ನು **ಅನುಬಂಧ**ದಲ್ಲಿ ಇರಿಸಿದೆ.<br><br>ಸರ್ಕಾರದ ಪತ್ರ ಸಂಖ್ಯೆ:ಎಫ್‌ಡಿ 48 ಇಎಫ್‌ಎಲ್2014, ದಿನಾಂಕ:31.10.2014ರಲ್ಲಿ ಸಿಎಲ್–9 ಸನ್ನದುಗಳನ್ನು ಊರ್ಜಿತಗೊಳಿಸುವಾಗ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ನ್ನು ಪಾಲಿಸಿಕೊಂಡು ಹಾಗೂ ಸಿಎಲ್–9 ಸನ್ನದು ಸ್ಥಗಿತಗೊಂಡಿದ್ದು, ಯಾರಿಗೂ ವರ್ಗಾವಣೆಯಾಗಿರುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು ಸನ್ನದನ್ನು ಊರ್ಜಿತಗೊಳಿಸಲು ತಿಳಿಸಲಾಗಿರುತ್ತದೆ. ಅದರಂತೆ ಸಿಎಲ್–9 ಸನ್ನದುಗಳಿಗೆ ಯಾವುದೇ ಕೋಟಾ ನಿಯಮಗಳನ್ನು ಪಾಲಿಸುತ್ತಿರುವುದಿಲ್ಲ. ಅನೂರ್ಜಿತಗೊಂಡಿರುವ ಸನ್ನದುಗಳನ್ನು ಊರ್ಜಿತಗೊಳಿಸಲು ಇಚ್ಛಿಸಿ ಅರ್ಜಿದಾರರು/ಸನ್ನದುದಾರರು ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ಅಬಕಾರಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ:ಇಸಿಐ/42/ಐಎಂಎಲ್/ನವೀಕರಣ/2020–21, ದಿನಾಂಕ:07.07.2023 ರಲ್ಲಿ ನವೀಕರಣಗೊಳ್ಳದೇ ಇರುವ ಸನ್ನದುಗಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 30 ರನ್ವಯ ಕ್ರಮವಹಿಸಲು ಸೂಚಿಸಲಾಗಿದ್ದು, |

| | | |
|---|---|---|
| | | ಅದರಂತೆ ಕೆಲವು ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳು ಸ್ಥಗಿತಗೊಂಡ ಸನ್ನದುಗಳ ಸನ್ನದುದಾರರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿರುತ್ತಾರೆ.<br><br>2009 ಮತ್ತು 2016ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಎಂ.ಎಸ್.ಐ.ಎಲ್ ಇವರಿಗೆ 1,363 ಸಿಎಲ್–11ಸಿ ಸನ್ನದುಗಳನ್ನು ಮಂಜೂರು ಮಾಡಲು ಅನುಮತಿ ನೀಡಲಾಗಿದ್ದು ಹಾಗೂ ಸಿಎಲ್–4, ಸಿಎಲ್–6ಎ, ಸಿಎಲ್–7 ಸನ್ನದುಗಳನ್ನು ಹೊಸದಾಗಿ ನೀಡಲಾಗುತ್ತಿರುವುದರಿಂದ, ಸ್ಥಗಿತಗೊಂಡಿರುವ ಸನ್ನದುಗಳಿಂದ ಆಗಬಹುದಾದಂತಹ ಮದ್ಯ ವ್ಯಾಪಾರವನ್ನು ಹಾಗೂ ಸನ್ನದು ಶುಲ್ಕವನ್ನು ಹೊಸದಾಗಿ ಮಂಜೂರಾತಿ ನೀಡುತ್ತಿರುವ ಸನ್ನದುಗಳಿಂದ ಆದಾಯವನ್ನು ಸರಿದೂಗಿಸಲಾಗುತ್ತಿದ್ದು, ಆದಾಯದ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ | ಸ್ಥಗಿತಗೊಂಡ ಸಿಎಲ್–2 ಮತ್ತು ಸಿಎಲ್–9 ಸನ್ನದುಗಳನ್ನು ಹಿಂಪಡೆದು ಹೊಸದಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರರಿಗೆ ನೀಡುವ ಚಿಂತನೆ ಇದೆಯೇ; (ಮಾಹಿತಿ ನೀಡುವುದು) | ಸಾಧಕ ಭಾದಕಗಳ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಇ | ಸಿಎಲ್–2 ಸನ್ನದುಗಳಿಗೆ ಸ್ಥಳಾಂತರ ಮತ್ತು ಊರ್ಜಿತಗೊಳಿಸಲು ಅನುಸರಿಸುತ್ತಿರುವ ಕೋಟಾ ಯಾವುದು; ಮತ್ತು ನಿಗಧಿ ಮಾಡಿದ ಕೋಟಾಗಿಂತ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸಿಎಲ್–2 ಸನ್ನದುಗಳನ್ನು ಹಿಂಪಡೆಯುವ ಬಗ್ಗೆ ಸರ್ಕಾರದಿಂದ ಕೈಗೊಂಡ | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) 1967ರ ನಿಯಮ 23ರನ್ವಯ, ಸಿಎಲ್–2 ಸನ್ನದುಗಳನ್ನು ಸ್ಥಳಾಂತರ ಮಾಡಲಾಗುತ್ತಿದೆ. ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 5–ಎ(3) ಅನ್ವಯ ಸ್ಥಗಿತಗೊಂಡಿರುವ ಸನ್ನದುಗಳನ್ನು ಊರ್ಜಿತಗೊಳಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ:ಹೆಚ್.ಡಿ 152 ಇ.ಎಫ್.ಎಲ್ 1986, ದಿನಾಂಕ:30.06.1987ರಲ್ಲಿ ನಿಗಧಿಪಡಿಸಿರುವ ಕೋಟಾವನ್ನು ಅನುಸರಿಸಿ ಸಿ.ಎಲ್–2 ಸನ್ನದುಗಳನ್ನು ಸ್ಥಳಾಂತರ ಮತ್ತು ಊರ್ಜಿತಗೊಳಿಸಲಾಗುತ್ತಿದೆ. |

| | | |
|---|---|---|
| | ಕ್ರಮಗಳೇನು; (ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:12164–12166/2016 ಮತ್ತು ಸಿವಿಲ್ ಅಪೀಲ್ ಸಂಖ್ಯೆ:12170/2016 ರಲ್ಲಿ ದಿನಾಂಕ:15-12-2016 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಭಾದಿತಗೊಂಡಿರುವ 3361 ಸನ್ನದುಗಳಿಗೆ ವಿನಾಯಿತಿ/ರಿಯಾಯಿತಿಗಳನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ:ಆಇ 35 ಇಎಫ್ಎಲ್ 2016, ದಿನಾಂಕ:27-06-2017 ರಲ್ಲಿ ಸನ್ನದು ಸ್ಥಳಾಂತರ ಕೋಟಾದ ಬಗ್ಗೆ ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 12 ರಲ್ಲಿ ನಿಗಧಿಪಡಿಸಿರುವ ಗರಿಷ್ಠ ಸನ್ನದುಗಳ ಸಂಖ್ಯೆ ಕೋಟಾ ಮಿತಿಯಿಂದ ಸಿಎಲ್–2 ಸನ್ನದುಗಳಿಗೆ ಮಾತ್ರ ಅನ್ವಯವಾಗುವಂತೆ ವಿನಾಯಿತಿ ನೀಡಲಾಗಿರುತ್ತದೆ ಮತ್ತು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 23 ರ 2ನೇ ಪರಂತುಕದಲ್ಲಿನ ನಿರ್ಬಂಧಗಳಿಂದ ವಿನಾಯಿತಿ ನೀಡಿ ಸನ್ನದುಗಳನ್ನು ಜಿಲ್ಲಾ ವ್ಯಾಪ್ತಿಯೊಳಗೆ ಸ್ಥಳಾಂತರಿಸಲು ಅಬಕಾರಿ ಉಪ ಆಯುಕ್ತರುಗಳಿಗೆ ಅಧಿಕಾರ ನೀಡಲಾಗಿರುತ್ತದೆ. ಈ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್.ಡಿ 17 ಪಿಇಎಸ್ 2017(1), ದಿನಾಂಕ:21-01-2018 ರಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 23 ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲಾಗಿರುತ್ತದೆ.<br><br>ಕೆಲವು ಸಿಎಲ್–2 ಸನ್ನದುಗಳು ಮೊದಲು ಗ್ರಾಮೀಣ ಭಾಗಕ್ಕೆ ಮಂಜೂರಾಗಿದ್ದು, ಕಾಲಕ್ರಮೇಣ ಜನಸಂಖ್ಯೆಯ ಏರಿಕೆ ಹಾಗೂ ಅಭಿವೃದ್ಧಿ ಹೊಂದಿದ ಪ್ರಯುಕ್ತ ತಾಲ್ಲೂಕುಗಳಲ್ಲಿನ ಕೆಲವೊಂದು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮತ್ತು ಪಟ್ಟಣ ಪಂಚಾಯಿತಿ/ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೇಗೇರಿಸಿರುವ ಕಾರಣ ಸದರಿ ಪ್ರದೇಶಗಳಲ್ಲಿ |

| | | |
|---|---|---|
| | | ಕಾರ್ಯನಿರ್ವಹಿಸುತ್ತಿರುವ ಸಿಎಲ್-2 ಸನ್ನದುಗಳು ನಗರ ಪ್ರದೇಶಕ್ಕೆ ಸೇರ್ಪಡೆಯಾಗುವುದರಿಂದ ತಾಲ್ಲೂಕುಗಳ ನಗರ ಪ್ರದೇಶಗಳಲ್ಲಿ ಕೋಟಾಗಿಂತ ಹೆಚ್ಚುವರಿಯಾಗಿ ಸಿಎಲ್-2 ಸನ್ನದುಗಳ ಕಾರ್ಯನಿರ್ವಹಿಸುತ್ತಿವೆ.<br><br>ಈ ಹಿಂದೆ 1987ರಲ್ಲಿ ಕೋಟಾ ನಿಗಧಿಪಡಿಸಿದ್ದು, ಸದರಿ ಕೋಟಾವನ್ನೇ ಪ್ರಸ್ತುತ ದಿನಾಂಕದವರೆಗೆ ಅನುಸರಿಸಲಾಗುತ್ತಿದೆ. |
| ಈ | ಈ ಹಿಂದೆ ಸಿಎಲ್-2 ಸನ್ನದುಗಳಿಗೆ ನಿಗದಿ ಮಾಡಿದ ಕೋಟಾ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ಸಂಖ್ಯೆ ಹೋಲಿಸಿದರೆ, ಕೋಟಾ ಬಾಕಿ ಉಳಿದಿದೆಯೇ; ಉಳಿದಿದ್ದಲ್ಲಿ ಅಂತಹ ಕೋಟಾ ಭರ್ತಿ ಮಾಡಲು ಇಲಾಖೆಯಿಂದ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಸರ್ಕಾರದ ಆದೇಶದ ಸಂಖ್ಯೆ:ಹೆಚ್.ಡಿ 152 ಇ.ಎಫ್.ಎಲ್ 1986, ದಿನಾಂಕ:30-06-1987 ರಲ್ಲಿ ತಾಲ್ಲೂಕುವಾರು ನಗರ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಒಟ್ಟಾರೆ 4206 ಸಿಎಲ್-2 ಸನ್ನದುಗಳ ಕೋಟಾ ನಿಗಧಿಪಡಿಸಲಾಗಿರುತ್ತದೆ. ಅದರಂತೆ ರಾಜ್ಯದಲ್ಲಿ ದಿನಾಂಕ:30.06.2024ರ ಅಂತ್ಯಕ್ಕೆ 3994 ಸಿಎಲ್-2 ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು, 212 ಸಿಎಲ್-2 ಸನ್ನದುಗಳ ಕೋಟಾ ಬಾಕಿ ಇರುತ್ತದೆ.<br><br>ಬಾಕಿ ಇರುವ 212 ಕೋಟಾ ಭರ್ತಿ ಮಾಡುವ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |

**ಆಇ 71 ಇಎಲ್‌ಕ್ಯೂ 2024**

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

# ಅನುಬಂಧ

| ಕ್ರ. ಸಂ | ಜಿಲ್ಲೆ | ಸ್ಥಗಿತಗೊಂಡಿರುವ ಸಿಎಲ್-2 ಸನ್ನದುಗಳ ಸಂಖ್ಯೆ | ಸ್ಥಗಿತಗೊಂಡಿರುವ ಸಿಎಲ್-9 ಸನ್ನದುಗಳ ಸಂಖ್ಯೆ |
|---|---|---|---|
| ಬೆಂಗಳೂರು ವಿಭಾಗ (ಉತ್ತರ) | | | |
| 1 | ಬೆಂಗಳೂರು ನಗರ ಜಿಲ್ಲೆ - 1 | 1 | 1 |
| 2 | ಬೆಂಗಳೂರು ನಗರ ಜಿಲ್ಲೆ - 2 | 3 | 2 |
| 3 | ಬೆಂಗಳೂರು ನಗರ ಜಿಲ್ಲೆ - 3 | 0 | 0 |
| 4 | ಬೆಂಗಳೂರು ನಗರ ಜಿಲ್ಲೆ - 4 | 2 | 3 |
| ಒಟ್ಟು | | 6 | 6 |
| ಬೆಂಗಳೂರು ವಿಭಾಗ (ದಕ್ಷಿಣ) | | | |
| 1 | ಬೆಂಗಳೂರು ನಗರ ಜಿಲ್ಲೆ - 5 | 5 | 3 |
| 2 | ಬೆಂಗಳೂರು ನಗರ ಜಿಲ್ಲೆ - 6 | 5 | 5 |
| 3 | ಬೆಂಗಳೂರು ನಗರ ಜಿಲ್ಲೆ - 7 | 2 | 1 |
| 4 | ಬೆಂಗಳೂರು ನಗರ ಜಿಲ್ಲೆ - 8 | 1 | 0 |
| 5 | ಕೋಲಾರ | 4 | 7 |
| ಒಟ್ಟು | | 17 | 16 |
| ಬೆಂಗಳೂರು ಗ್ರಾಮಾಂತರ ವಿಭಾಗ | | | |
| 1 | ಬೆಂಗಳೂರು ಗ್ರಾಮಾಂತರ | 1 | 1 |
| 2 | ಚಿಕ್ಕಬಳ್ಳಾಪುರ | 2 | 1 |
| 3 | ರಾಮನಗರ | 1 | 0 |
| 4 | ತುಮಕೂರು | 7 | 3 |
| ಒಟ್ಟು | | 11 | 5 |
| ಬೆಳಗಾವಿ ವಿಭಾಗ | | | |
| 1 | ಬಾಗಲಕೋಟೆ | 5 | 1 |
| 2 | ಬೆಳಗಾವಿ ಉತ್ತರ | 3 | 0 |
| 3 | ಬೆಳಗಾವಿ ದಕ್ಷಿಣ | 1 | 0 |
| 4 | ವಿಜಯಪುರ | 2 | 0 |
| 5 | ಧಾರವಾಡ | 19 | 2 |
| ಒಟ್ಟು | | 30 | 3 |
| ದಾವಣಗೆರೆ ವಿಭಾಗ | | | |
| 1 | ಚಿಕ್ಕಮಗಳೂರು | 3 | 7 |
| 2 | ದಾವಣಗೆರೆ | 7 | 9 |
| 3 | ಹಾವೇರಿ | 4 | 2 |
| 4 | ಶಿವಮೊಗ್ಗ | 11 | 10 |
| ಒಟ್ಟು | | 25 | 28 |
| ಹೊಸಪೇಟೆ ವಿಭಾಗ | | | |
| 1 | ಬಳ್ಳಾರಿ | 0 | 0 |
| 2 | ವಿಜಯನಗರ | 3 | 0 |
| 3 | ಚಿತ್ರದುರ್ಗ | 12 | 16 |
| 4 | ಗದಗ | 11 | 0 |
| 5 | ಕೊಪ್ಪಳ | 0 | 0 |
| ಒಟ್ಟು | | 26 | 16 |
| ಕಲಬುರಗಿ ವಿಭಾಗ | | | |
| 1 | ಬೀದರ್ | 1 | 0 |
| 2 | ಕಲಬುರಗಿ | 0 | 0 |
| 3 | ರಾಯಚೂರು | 0 | 0 |
| 4 | ಯಾದಗಿರಿ | 5 | 0 |
| ಒಟ್ಟು | | 6 | 0 |
| ಮಂಗಳೂರು ವಿಭಾಗ | | | |
| 1 | ದಕ್ಷಿಣ ಕನ್ನಡ | 1 | 6 |
| 2 | ಕೊಡಗು | 0 | 0 |
| 3 | ಉಡುಪಿ | 2 | 5 |
| 4 | ಉತ್ತರ ಕನ್ನಡ | 2 | 1 |
| ಒಟ್ಟು | | 5 | 12 |
| ಮೈಸೂರು ವಿಭಾಗ | | | |
| 1 | ಚಾಮರಾಜನಗರ | 1 | 0 |
| 2 | ಹಾಸನ | 1 | 1 |
| 3 | ಮಂಡ್ಯ | 4 | 4 |
| 4 | ಮೈಸೂರು ನಗರ | 0 | 2 |
| 5 | ಮೈಸೂರು ಗ್ರಾಮಾಂತರ | 1 | 0 |
| ಒಟ್ಟು | | 7 | 7 |
| ರಾಜ್ಯದ ಒಟ್ಟು | | 133 | 93 |

ಆಇ 71 ಇಎಲ್‌ಕ್ಯೂ 2024